ದಿನಕರ್ ಜೋಶಿ (ಜನನ: ಜೂನ್ 30, 1937) ಗುಜರಾತಿನ ಪ್ರಮುಖ ಲೇಖಕರಲ್ಲೊಬ್ಬರು. 45 ಕಾದಂಬರಿ, 13 ಕಥಾಸಂಕಲನಗಳು ಸೇರಿದಂತೆ 150ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರು, ರಾಮಾಯಣ, ಮಹಾಭಾರತ, ವೇದ–ಉಪನಿಷತ್‌ಗಳನ್ನು ಕುರಿತಂತೆ ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ. ಗಾಂಧಿ ಮತ್ತು ಅವರ ಪುತ್ರ ಹರಿಲಾಲ್ ನಡುವಣ ಸಂಘರ್ಷದ ಕಥನವನ್ನೊಳಗೊಂಡ ಕಾದಂಬರಿ, 'ಮಹಾತ್ಮ ವರ್ಸಸ್ ಗಾಂಧಿ' ಹೆಸರಿನಲ್ಲಿ ದೇಶವಿದೇಶಗಳಲ್ಲಿ ರಂಗಪ್ರದರ್ಶನ ಕಂಡಿದೆ. ಅವರ ನೇತೃತ್ವದಲ್ಲಿ ರೂಪುಗೊಂಡ 'ಗುಜರಾತಿ ಸಾಹಿತ್ಯ ಪ್ರಧಾನ ಪರಿಷತ್', ಗುಜರಾತಿಯ ಅತ್ಯುತ್ತಮ ಕೃತಿಗಳನ್ನು ಇಂಗ್ಲಿಷ್ ಹಾಗೂ ಭಾರತೀಯ ಭಾಷೆಗಳಿಗೆ ಅನುವಾದಿಸುವ ಕೆಲಸ ಮಾಡುತ್ತಿದೆ.



ದಿನಕರ ಜೋಶಿ



ಡಿ.ಎನ್. ಶ್ರೀನಾಥ್

ದಿನಕರ್ ಜೋಶಿ ಅವರ ಕಾದಂಬರಿಯನ್ನು ಕನ್ನಡಕ್ಕೆ ತಂದಿರುವ ಶಿವಮೊಗ್ಗದ ಡಿ.ಎನ್. ಶ್ರೀನಾಥ್, ಹಿಂದಿ ಮತ್ತು ಕನ್ನಡ ನಡುವಣ ಸಾಂಸ್ಕೃತಿಕ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಿರುವ ಸಶಕ್ತ ಅನುವಾದಕರು. ಈವರೆಗೆ ಸುಮಾರು 80 ಕೃತಿಗಳನ್ನು ಅನುವಾದಿಸಿರುವ ಅವರು, ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದಿದ್ದಾರೆ. ಹಿಂದಿ ಮತ್ತು ಬಂಗಾಲಿ ಕೃತಿಗಳನ್ನು ಕನ್ನಡಕ್ಕೆ ತಂದಂತೆಯೇ, ಜಿ.ಎಸ್. ಶಿವರುದ್ರಪ್ಪ, ಪೂರ್ಣಚಂದ್ರ ತೇಜಸ್ವಿ ಸೇರಿದಂತೆ ಕನ್ನಡದ ಹಲವು ಪ್ರಮುಖ ಲೇಖಕರನ್ನು ಹಿಂದಿಗೆ ಪರಿಚಯಿಸಿದ್ದಾರೆ. ಈ ಸಾಂಸ್ಕೃತಿಕ ಅನುಸಂಧಾನದ ಹೊಸ ಫಲ 'ಬೆಳಕಿನ ನೆರಳು' ಈ ವಾರದಿಂದ ಧಾರಾವಾಹಿ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ.

ಕೊನೆಯ ಬಾರಿಗೆ ನೋಡಿದ್ದ ದೃಶ್ಯ ಅವರ ಕಣ್ಣುಗಳೆದುರು ಮೂಡಿತು. ಕೊಳಕು ಧೋತರ, ಹರಿದ ಕಾಲರುಗಳ ಅಂಗಿ, ಚಿಂದಿಯಾಗುತ್ತಿದ್ದ ಹಾಫ್ ಕೋಟ್, ಹರಕು ಚಪ್ಪಲಿ, ಗಲ್ಲಗಳಲ್ಲಿ ಎದ್ದು ಕಾಣುತ್ತಿದ್ದ ಮೂಳೆಗಳು, ಒಳಗೆ ಹೂತು ಹೋಗಿದ್ದ ಕೆಂಪು ಕಣ್ಣುಗಳು ಮತ್ತು ಅದೆಷ್ಟೋ ದಿನಗಳಿಂದ ಸಿಕ್ಕುಸಿಕ್ಕಾದ ತಲೆಗೂದಲುಗಳು... ಅಕಸ್ಮಾತ್ ಅವರ ಕಣ್ಣುಗಳೆದುರು ಇನ್ನೊಬ್ಬ ಹರಿಲಾಲನ ಛವಿ ಮೂಡಿತು; ಈ ಛವಿಯನ್ನು ಈ ಹಿಂದೆ ಅವರು ನೋಡಿರಲಿಲ್ಲ. ದೇವದಾಸ್ ಚಿಕ್ಕಪ್ಪ ಒಮ್ಮೆ ಮಾತಿನ ಮಧ್ಯದಲ್ಲಿ ಹೇಳಿದ್ದರು

'ಒಂದು ವೇಳೆ ನೀನು ಇಪ್ಪತ್ತು ವರ್ಷ ಹಿಂದಿನ ಹರಿಲಾಲನನ್ನು ನೋಡಿದ್ದರೆ, ಇವತ್ತಿನ ಹರಿಲಾಲನ ಕಲ್ಪನೆಯನ್ನೂ ಸಹ ನೀನು ಮಾಡಿಕೊಳ್ಳಲಾರೆ. ನಡುವೆ ಬೈತಲೆ, ಅದರ ಅಕ್ಕಪಕ್ಕ ಉದ್ದುದ್ದ ಹಾರುವ ಗುಂಗುರು ತಲೆಕೂದಲುಗಳು... ಅಜಾನುಬಾಹು ಶರೀರ... ಬಿಳಿ ಮೈಬಣ್ಣ.... ಗಟ್ಟಿಮುಟ್ಟಾದ ಶರೀರ...ಇದು ಆಗಿನ ಅವನ ರೂಪವಾಗಿತ್ತು...'

ಕೇಶವಲಾಲರು ನಿಟ್ಟುಸಿರು ಬಿಟ್ಟರು. ಅವರ ಅದೃಷ್ಟದಲ್ಲಿ ಅಂಥ ಹರಿಲಾಲನನ್ನು ನೋಡುವ ಅವಕಾಶ ಬರೆದಿರಲಿಲ್ಲ. ಅವರು ನೋಡಿದ್ದ ಹರಿಲಾಲ ದರಿದ್ರನಾಗಿದ್ದ, ಬಡವನಾಗಿದ್ದ. ಅಂದು ಅವನು ಜಬಲಪುರದ ಮೇಲ್‌ನಲ್ಲಿ ಪ್ರಯಾಣಿಸುವಾಗ, ಕಟನಿ ಸ್ಟೇಷನ್‌ನಲ್ಲಿ ಕೇಳಿದ್ದ ಆ ಕ್ಷೀಣ ಧ್ವನಿ ಈಗಲೂ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿತ್ತು.

'...ಬಾ...ಬಾ...ಬಾ...'

ಆಗಲೇ ಬಾಗಿಲು ತಟ್ಟಿದ ಸದ್ದಾಯಿತು.

ಕೇಶವಲಾಲರು ಗಾಬರಿಯಿಂದ ಎದ್ದು ಕೂತರು.

ಚೌಕಟ್ಟಿನಲ್ಲಿ ಸುರೇಂದ್ರ ಮಶರೂವಾಲಾ ನಿಂತಿದ್ದರು.

ಕೇಶವಲಾಲರು ಒಂದು ಶಬ್ದವನ್ನೂ ಹೇಳದೆ ನಿಲುವಂಗಿಯನ್ನು ಧರಿಸಿದರು, ತಲೆಗೆ ಟೋಪಿ ಹಾಕಿಕೊಂಡರು.

'ನೋಡು...' ಹೋಗುವಾಗ ಅವರು ಹೆಂಡತಿಗೆ ಹೇಳಿದರು, 'ನಾವು ಬರುವುದು ತಡವಾದರೆ ನೀನು ಊಟ ಮಾಡಿಬಿಡು, ಚಿಂತೆ ಮಾಡಬೇಡ.'

'ಆಗಲಿ. ನೀವಿಬ್ಬರು ಎಚ್ಚರದಿಂದ ಹೋಗಿ... ರಾತ್ರಿ ಸಮಯ...ನೀವು ಹೋಗುವ ಜಾಗ...' ಕೇಶವಲಾಲರ ಹೆಂಡತಿ, ಫೌರಸ್ ರೋಡಿನ ಹೆಸರು ಹೇಳುತ್ತಲೇ ಭಯಗೊಂಡಿರುವಂತೆ ಕಂಡಿತು.

'ನೀವೇನೂ ಚಿಂತಿಸಬೇಡಿ...' ಸುರೇಂದ್ರರು ಧೈರ್ಯ ಹೇಳಿದರು. ನಂತರ ಇಬ್ಬರು ಮಾತನಾಡದೆ ಮೆಟ್ಟಿಲುಗಳನ್ನಿಳಿದು ರಸ್ತೆಗೆ ಬಂದರು. ರಾತ್ರಿಯ ಅಂಧಕಾರ ದಟ್ಟವಾಗುತ್ತಿತ್ತು.

## ಎರಡು

ಕೇಶವಲಾಲ್ ಮತ್ತು ಸುರೇಂದ್ರರು ಗ್ರಾಂಟ್ ರೋಡ್ ಸ್ಟೇಷನ್‌ನಲ್ಲಿ ಇಳಿದಾಗ ರಾತ್ರಿಯ ಎಂಟೂವರೆ ಗಂಟೆಯಾಗಿತ್ತು. ಬೇರೆ ವೇಳೆಯಾಗಿದ್ದರೆ ಇಬ್ಬರು ಏನನ್ನೂ ವಿಚಾರಿಸದೆ ಟ್ರಾಮ್ ಹಿಡಿಯಲು ಟ್ರಾಮ್ ಇರುವ ದಿಕ್ಕಿಗೆ ಹೋಗುತ್ತಿದ್ದರು, ಆದರೆ ಇಂದು ಇಬ್ಬರು ಪರಸ್ಪರರ ಮನಸ್ಸಿನ ಮಾತನ್ನು ಅರಿತವರಂತೆ ಪರಸ್ಪರ ನೋಡಿಕೊಂಡರು.

'ವಿಕ್ಟೋರಿಯಾದಲ್ಲಿಯೇ ಹೋಗೋಣ, ಕೇಶವ್ ಭಾಯಿ' ಸುರೇಂದ್ರರು ಸಲಹೆಯಿತ್ತರು.

'ಹೌದು, ಇದೇ ಸರಿ' ಕೇಶವಲಾಲರು ಭಾರವಾದ ಧ್ವನಿಯಲ್ಲಿ ಉಸುರಿದರು, 'ಟ್ರಾಮಿನ ಯಾವ ಸ್ಟಾಪ್‌ನಲ್ಲಿ ಇಳಿಯಬೇಕೋ, ನಮಗೆ ಗೊತ್ತಿಲ್ಲ. ಅಲ್ಲದೆ, ಆ ಚೌಕದ ಬಿಲ್ಡಿಂಗ್ ಜಾಗವೂ ನಮಗೆ ಗೊತ್ತಿಲ್ಲ...'

ಉದ್ದನೆಯ ಕೆಂಪು ಟರ್ಕಿ ಟೋಪಿಯನ್ನು ಧರಿಸಿದ ವಿಕ್ಟೋರಿಯಾನೊಬ್ಬನನ್ನು ಸುರೇಂದ್ರರು ತಡೆದರು. ಖಿಲಾಫಾ ಮತ್ತು ಖಿಲಾಫತ್ ಹೊರಟು ಹೋಗಿ ಸಾಕಷ್ಟು ಸಮಯ ಕಳೆದಿತ್ತು, ಆದರೂ ಗಾಂಧೀಜಿಯವರ ಪುಣ್ಯ ಪ್ರತಾಪದಿಂದ, ಟರ್ಕಿ ಟೋಪಿಗಳು ಮುಂಬೈನ ವಿಕ್ಟೋರಿಯಾ ಚಾಲನೆ ಮಾಡುವ ವರ್ಗವೊಂದರ ಕಿರೀಟವಾಗಿ ಈಗಲೂ ಉಳಿದುಕೊಂಡಿದ್ದವು.

'ಎಲ್ಲಿಗೆ ಹೋಗಬೇಕು, ಬಾಬೂಜಿ?' ಚಾಲಕ ಕೇಳಿದ. ಸುರೇಂದ್ರರು ಕೇಶವಲಾಲರನ್ನು ನೋಡಿದರು. ಫೌರಸ್ ರೋಡಿನ ಹೆಸರು ಹೇಳಲು ಇಬ್ಬರ ನಾಲಿಗೆ ಸಿದ್ಧವಾಗಿಲ್ಲ ಎಂಬುವುದನ್ನು ಕೇಶವಲಾಲರು ಅರಿತರು.

'ನಲ್ ಬಾಜಾರ್ ಕಡೆಗೆ ಕರೆದುಕೊಂಡು ಹೋಗಪ್ಪ...ಮುಂದೆ ನಾನು ರಸ್ತೆಯನ್ನು ಹೇಳುತ್ತೇನೆ...' ಕೇಶವಲಾಲರು ಬುದ್ಧಿವಂತಿಕೆಯಿಂದ ಹೇಳಿದರು.

ಸುರೇಂದ್ರರಿಗೆ ಕೇಶವಲಾಲರ ಬುದ್ಧಿವಂತಿಕೆ ಅರ್ಥವಾಯಿತು, ಅವರು ಮೆಲ್ಲನೆ ನಕ್ಕರು. ಇಬ್ಬರೂ ವಿಕ್ಟೋರಿಯಾದಲ್ಲಿ ಕೂತರು. ವಾಹನ ಮುಂದುವರೆಯಿತು. ಪಿಲಾ ಹೌಸ್‌ನ ಸರ್ಕಲ್‌ನಲ್ಲಿ ರಸ್ತೆ ಇಬ್ಬದಿಯಲ್ಲಿ ಹಂಚಿಹೋಗಿತ್ತು. ಅಲ್ಲಿಗೆ ಹೋದ ನಂತರ ಚಾಲಕ ಹಿಂದಕ್ಕೆ ಹೊರಳದೆ ಕೇಳಿದ, 'ಈಗ ಯಾವ ಕಡೆಗೆ ಹೋಗಲಿ, ಸಾಹೇಬರೇ?'

ಇದು ಲಕ್ಷ ರೂಪಾಯಿಯ ಪ್ರಶ್ನೆಯಾಗಿತ್ತು. ಫೌರಸ್ ರೋಡಿನೆಡೆಗೆ ಬೆರಳು ಮಾಡಿ ತೋರಿಸುವುದೇ?

ಇಲ್ಲ, ಇದನ್ನು ನಂಬಲು ಸಾಧ್ಯವೇ ಇಲ್ಲ. ಇವರು ಸ್ವಚ್ಛ ಶ್ವೇತ ಖಾದಿಧಾರಿಗಳು; ಅಲ್ಲದೆ ತಲೆಯಲ್ಲಿ ಗಾಂಧಿ ಟೋಪಿ! ಈ ಚಾಲಕ ಗಾಂಧಿಯ ಹೆಸರಿನಲ್ಲಿ ಬೇಸರದ ಮಾತುಗಳನ್ನಾಡದಿರಲಿ, ದೇವ!

'ಏನು? ಮಹಾ ಖಾದಿಧಾರಿಗಳು! ಫೌರಸ್ ರೋಡಿಗೆ ಹೋಗಬೇಕಂತೆ...'

ಚಾಲಕ ಒಂದು ಶಬ್ದವನ್ನೂ ಹೇಳಲಿಲ್ಲ, ಆದರೂ ಇಬ್ಬರಿಗೆ, ಚಾಲಕ ಖಂಡಿತ ಮೀಸೆಯ ತುದಿಗಳಲ್ಲಿ ಜುಗುಪ್ಸೆಯಿಂದ ನಗುತ್ತಿರುವಂತೆ ಭಾಸವಾಯಿತು.

'ಇಲ್ಲೇ ನಿಲ್ಲಿಸಿಬಿಡಪ್ಪ...!' ಸುರೇಂದ್ರರು ಆತುರದಿಂದ ಹೇಳಿದರು. ನಂತರ ಕೇಶವಲಾಲರನ್ನು ನೋಡುತ್ತಾ ಮೆಲ್ಲನೆ ಹೇಳಿದರು, 'ನಾವು ಇಲ್ಲಿಂದಲೇ ಕಾಲ್ನಡಿಗೆಯಲ್ಲಿ ಹೋಗಿ ಆ ಬಿಲ್ಡಿಂಗನ್ನು